



## ಸಂಸ್ಕಾರ

ಸಂಸ್ಕಾರದೋಷದಿಂದ ಮಾಯೆ ಹೋಗುವುದಿಲ್ಲ. ಅನೇಕ ಜನ್ಮಗಳಿಂದ ಈ ಮಾಯಾ ಸಂಸಾರದಲ್ಲಿಯೆ ಇದ್ದು ಇದ್ದು ಮಾಯೆಯೇ ಸತ್ಯ ಎಂಬ ಬೋಧೆ ಬಂದುಬಿಟ್ಟಿದೆ. ಸಂಸ್ಕಾರಕ್ಕೆ ಎಷ್ಟು ಬಲ ಎಂಬುದನ್ನು ಕೇಳಿ. ಒಬ್ಬ ರಾಜಕುಮಾರ ತನ್ನ ಹಿಂದಿನ ಜನ್ಮದಲ್ಲಿ ಅಗಸನ ಮನೆಯಲ್ಲಿ ಜನ್ಮವೆತ್ತಿದ್ದ. ಈ ಜನ್ಮದಲ್ಲಿ ರಾಜಕುಮಾರನಾಗಿ ಹುಟ್ಟಿ ಆಟವಾಡುವಾಗ ತನ್ನ ಸಂಗಾತಿಗಳಿಗೆ ಹೇಳುತ್ತಾನೆ: "ಈ ಆಟಗಳನ್ನೆಲ್ಲ ಒಂದು ಕಡೆ ಕಟ್ಟಿಡಿ. ನಾನು ಬಗ್ಗಿ ನಿಂತುಕೊಳ್ಳುತ್ತೇನೆ. ನೀವು ನನ್ನ ಬೆನ್ನಿನ ಮೇಲೆ `ಉಸ್' `ಉಸ್' ಅಂತ ಬಟ್ಟೆ ಒಗೆಯಿರಿ" ಎಂದು! (ಎಲ್ಲರೂ ನಗುತ್ತಾರೆ) ಇಲ್ಲಿಗೆ ಅನೇಕ ಯುವಕರು ಬರುತ್ತಾರೆ. ಆದರೆ ಎಲ್ಲೊ ಕೆಲವರು ಮಾತ್ರ ಭಗವಂತನಿಗಾಗಿ ವ್ಯಾಕುಲ ಪಡುತ್ತಾರೆ. ಅವರು ಒಳ್ಳೆಯ ಸಂಸ್ಕಾರ ಪಡೆದುಕೊಂಡು ಬಂದಿದ್ದಾರೆ. ವಿವಾಹ ಎಂಬ ಪದವನ್ನು ಕೇಳಿದರೇನೆ ಅವರಿಗೆ ಮೈಯೆಲ್ಲಾ ನಡಗುತ್ತದೆ. ಅದರ ವಿಷಯವಾಗಿ ಯೋಚಿಸುವುದೇ ಇಲ್ಲ. ಉಳಿದ ಯುವಕರ ದೃಷ್ಟಿ ಯಾವ ಕಡೆ? ದುಡ್ಡು ಸಂಪಾದನೆ ಹೇಗೆ ಮಾಡೋದು; ಮನೆ, ಸಾರೋಟು, ಪೋಷಾಕು, ಬಳಿಕ ವಿವಾಹ—ಇದಕ್ಕಾಗಿ ಹಗಲು, ಇರುಳು ಚಿಂತಿಸೋದು. ಮದುವೆ ಮಾಡಿಕೊಳ್ಳಬೇಕಾಗಿ ಬಂದಾಗ, ಮೊದಲೇ ಹುಡುಗಿಯ ವಿಶಿಷ್ಟವನ್ನೆಲ್ಲ ಕೇಳಿ ತಿಳಿದುಕೊಳ್ಳಬೇಕು! ಜೊತೆಗೆ ಹುಡುಗಿ ಸುಂದರಿಯೊ ಅಲ್ಲವೊ ಎಂಬುದನ್ನು ತಾವೇ ಖುದ್ದಾಗಿ ಕಣ್ಣಿನಿಂದ ನೋಡಬೇಕು!

ಗಿರೀಶ: ನಿಮ್ಮ ಕೃಪೆಯೊಂದು ದೊರೆಯಿತು ಎಂದರೆ ಎಲ್ಲಾ ದೊರೆತುಬಿಡುತ್ತದೆ. ನಾನು ಹಿಂದೆ ಏನಾಗಿದ್ದೆ, ಈಗ ಏನಾಗಿ ದ್ದೇನೆ!

ಶ್ರೀರಾಮಕೃಷ್ಣರು: ನಿನ್ನಲ್ಲಿ ಒಳ್ಳೆಯ ಸಂಸ್ಕಾರವಿತ್ತು; ಅದು ಈಗ ವ್ಯಕ್ತವಾಗುತ್ತಿದೆ. ಸಮಯ ಬರದ ಹೊರತು ಏನೂ ಆಗದು. ಯಾವಾಗ ರೋಗ ಗುಣಮುಖವಾಗಿ ಬರುತ್ತಿತ್ತೊ ಆಗ ಕವಿರಾಜ ರೋಗಿಗೆ ಹೇಳಿದ, "ಈ ಎಲೆಗೆ ಮೆಣಸಿನಕಾಳು ಸೇರಿಸಿ ತಿನ್ನು" ಅಂತ. ಆಗ ರೋಗಿ ಗುಣವಾಗಿಬಿಟ್ಟ. ಈಗ ಮೆಣಸಿನ ಕಾಳಿನೊಡನೆ ತಿಂದ ಔಷಧ ಆತನನ್ನು ಗುಣ ಪಡಿಸಿತೊ ಅಥವಾ ತಾನಾಗಿಯೆ ಆತ ಗುಣಹೊಂದಿದನೊ ಇದನ್ನು ಯಾರು ತಾನೆ ಹೇಳಬಲ್ಲರು?

ಕೆಲವರು ಭೋಗಿಸಬೇಕಾದ್ದು, ಮಾಡಬೇಕಾದ್ದು ಬಹಳವಾಗಿ ಉಳಿದುಕೊಂಡಿರುತ್ತದೆ. ಆದ್ದರಿಂದ ಅವರು ಭಗವಂತನ ಕಡೆಗೆ ತಿರುಗಬೇಕಾದರೆ ಸ್ವಲ್ಪ ಹೆಚ್ಚು ಸಮಯವೇ ಬೇಕಾಗುತ್ತದೆ. ಕುರು ಇನ್ನೂ ಮಾಗದೆ ಇರುವಾಗ ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿದರೆ ಅದು ವಿಪರೀತಕ್ಕಿಟ್ಟುಕೊಳ್ಳುತ್ತದೆ. ಅದು ಹಣ್ಣಾಗಿ ಮೊಳೆ ಬಂದರೆ ಆಗ ಡಾಕ್ಟರ್ ಶಸ್ತ್ರಚಿಕಿತ್ಸೆ ಮಾಡುತ್ತಾನೆ. ಒಮ್ಮೆ ಒಂದು ಮಗು ತನ್ನ ತಾಯಿಗೆ ಹೇಳಿತು: "ಅಮ್ಮ, ನನಗೆ ಈಗ ನಿದ್ದೆ ಬರುತ್ತಿದೆ. ನನಗೆ ಮೂತ್ರ ಬಂದಾಗ ದಯವಿಟ್ಟು ನನ್ನನ್ನು ಎಬ್ಬಿಸಿಬಿಡು." ತಾಯಿ ಹೇಳಿದಳು: "ಮಗು, ಅದೇ ನಿನ್ನನ್ನು ಎಬ್ಬಿಸಿಬಿಡುತ್ತದೆ. ನಾನು ಏಳಿಸಬೇಕಾದ ಆವಶ್ಯಕತೆಯೇನೂ ಇರುವುದಿಲ್ಲ."

ಪೂರ್ವಜನ್ಮದ ಸಂಸ್ಕಾರವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದರ ಸಂಬಂಧವಾಗಿ ಶವಸಾಧನೆ ಮಾಡುತ್ತಿದ್ದ ಒಬ್ಬನ ಕಥೆ ಕೇಳಿ. ಆತ ದಟ್ಟ ಅಡವಿಗೆ ಹೋಗಿ ಭಗವತಿಯ ಆರಾಧನೆ ನಡೆಸುತ್ತಿದ್ದ. ಮೊದಲು ಆತನಿಗೆ ಭಯಂಕರ ದರ್ಶನಗಳೆಲ್ಲ ಆದವು. ಕೊನೆಗೆ ಒಂದು ಹುಲಿ ಬಂದು ಆತನನ್ನು ಹಿಡಿದು ಕೊಂದುಹಾಕಿಬಿಟ್ಟಿತು. ಆ ಮಾರ್ಗವಾಗಿ ಹೋಗುತ್ತಿದ್ದ ಒಬ್ಬ ಮನುಷ್ಯ ಹುಲಿಯನ್ನು ಕಂಡು ಮರ ಹತ್ತಿಬಿಟ್ಟಿದ್ದ. ಶವ ಮತ್ತು ಅದರ ಪೂಜೆಗೆ ಬೇಕಾದ ಅನೇಕ ಪೂಜಾಸಲಕರಣೆಗಳು ಅಲ್ಲಿ ಸಿದ್ಧವಾಗಿರುವುದನ್ನು ನೋಡಿ, ಮರದಿಂದಿಳಿದು ಬಂದು ಆಚಮನ ಮಾಡಿ, ಶವದ ಮೇಲೆ ಕುಳಿತುಕೊಂಡುಬಿಟ್ಟ. ಸ್ವಲ್ಪ ಜಪ–ತಪ ಮಾಡುವುದರೊಳಗೇ ಭಗವತಿ ಸಾಕ್ಷಾತ್ಕಾರಳಾಗಿ ಆತನಿಗೆ ಹೇಳಿದಳು: "ಮಗೂ, ನಾನು ನಿನ್ನ ತಪಸ್ಸನ್ನು ಬಹಳ ಮೆಚ್ಚಿದ್ದೇನೆ. ಯಾವ ವರ ಬೇಕಾದರೂ ಕೇಳು." ಭಗವತಿಯ ಪಾದಪದ್ಮಗಳಿಗೆ ಪ್ರಣಾಮ ಮಾಡಿ ಆತ ಹೇಳಿದ: "ಹೇ ತಾಯೆ, ನಿನಗೊಂದು ಪ್ರಶ್ನೆ ಹಾಕಬೇಕೆಂದಿದ್ದೇನೆ. ನಿನ್ನ ಕಾರ್ಯ ನೋಡಿ ನಾನು ಬಹಳವಾಗಿ ಆಶ್ಚರ್ಯಚಕಿತನಾಗಿದ್ದೇನೆ. ಆ ಮನುಷ್ಯ ಅಷ್ಟೊಂದು ಕಷ್ಟ ತೆಗೆದುಕೊಂಡು, ಇಷ್ಟೊಂದು ಪೂಜಾಸಾಮಗ್ರಿಗಳನ್ನೆಲ್ಲಾ ಹವಣಿಸಿಕೊಂಡು, ಬಹಳ ಕಾಲ ನಿನ್ನನ್ನು ಪೂಜಿಸಿದ. ಆದರೂ ನೀನು ಆತನ ಮೇಲೆ ದಯೆ ತೋರಲೇ ಇಲ್ಲ! ಆದರೆ ನನಗೆ ಏನೆಂದರೆ ಏನೂ ಗೊತ್ತಿಲ್ಲ; ನಾನು ಭಜನಹೀನ, ಸಾಧನಹೀನ, ಜ್ಞಾನಹೀನ, ಭಕ್ತಿಹೀನ. ಆದರೂ ನನ್ನ ಮೇಲೆ ಇಷ್ಟೊಂದು ಕೃಪೆತೋರಿಬಿಟ್ಟೆಯಲ್ಲ!" ಭಗವತಿ ನಗುತ್ತ ನಗುತ್ತ ಹೇಳಿದಳು: "ಮಗು, ನಿನಗೆ ನಿನ್ನ ಹಿಂದಿನ ಜನ್ಮಗಳ ಜ್ಞಾಪಕ ಇಲ್ಲ. ನೀನು ನನಗಾಗಿ ಅನೇಕ ಜನ್ಮಗಳಲ್ಲಿ ತಪಸ್ಸು ಮಾಡಿದ್ದೀಯೆ. ಆ ತಪಸ್ಸಿನ ಬಲದಿಂದ ಈ ಅನುಕೂಲಗಳೆಲ್ಲ ಒದಗಿ ನಿನಗೆ ನನ್ನ ದರ್ಶನ ದೊರೆತಿದೆ. ಈಗ ಯಾವ ವರ ಬೇಕು ಕೇಳು."